5029 (5609) ಶ್ರೀ .ಕಿರಣ್ ಕುಮಾರ್. ಕೆ.ಎಸ್. (ಕಳ್ಳಂಬೆಳ್ಳ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ತುಮಕೂರು ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಪಲ್ಸ್ ಪೋಲಿಯೋ ರಾಷ್ಟ್ರೀಯ ಕಾರ್ಯಕ್ರಮ ಯಶಸ್ವಿಗೊಂಡಿದೆಯೇ. ಇಲ್ಲದಿದ್ದಲ್ಲಿ ಕಾರಣಗಳೇನು?

2. ಯಶಸ್ವಿಯಾಗದಿರಲು ಸಿಬ್ಬಂದಿಗಳ ಕಾರಣವೇ? ಈ ಕಾರ್ಯಕ್ರಮಕ್ಕೆ ಭಾಗವಹಿಸದೇ ಇರುವವರ ಕವೈದ್ಯರು ಹಾಗೂ ಸಿಬ್ಬಂದಿಗಳೆಷ್ಟು? ತಾಲ್ಲೂಕುವಾರು ವಿವರ ನೀಡುವುದು

3. ಇಂತಹವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? ಇಲ್ಲದಿದ್ದಲ್ಲಿ ಏತಕ್ಕಾಗಿ ಕ್ರಮ ತೆಗೆದುಕೊಂಡಿಲ್ಲ. ವಿವರಗಳನ್ನು ಒದಗಿಸುವುದು

4. ಅಂತಹ ಸಿಬ್ಬಂದಿ ವೈದ್ಯರ ವಿವರಗಳನ್ನು ನೀಡುವುದು

ಶ್ರೀ ಎನ್. ಚಲುವರಾಯಸ್ವಾಮಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

1. ತುಮಕೂರು ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಪಲ್ಸ್ ಪೋಲೀಯೋ ರಾಷ್ಟ್ರೀಯ ಕಾರ್ಯಕ್ರಮ ಯಶಸ್ವಿಯಾಗಿರುತ್ತದೆ. 10–4–2005ರಂದು ನಡೆದ ಕಾರ್ಯಕ್ರಮದಲ್ಲಿ ಜಿಲ್ಲೆಯು 99.7% ಪ್ರಗತಿ ಸಾಧಿಸಿರುತ್ತದೆ. 15–5–2005ರಂದು ನಡೆದ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಜಿಲ್ಲೆಯು 99.96% ಪ್ರಗತಿ ಸಾಧಿಸಿರುತ್ತದೆ.

2. ಜಿಲ್ಲೆಯಲ್ಲಿ ಕಾರ್ಯಕ್ರಮ ಯಶಸ್ವಿಯಾಗಲು ಸಿಬ್ಬಂದಿಯ ಕೊರತೆ ಕಂಡು ಬಂದಿಲ್ಲ. ಇತರೇ ಇಲಾಖೆಗಳ ಹಾಗೂ ಸ್ವಯಂ ಸೇವಾ ಸಂಘದ ಸಹಕಾರದಿಂದ ಕಾರ್ಯಕ್ರಮ ಯಶಸ್ವಿಗೊಳಿಸಲಾಗಿದೆ. ಜಿಲ್ಲೆಯಲ್ಲಿ ದೀರ್ಘಕಾಲದಿಂದ ಕರ್ತವ್ಯಕ್ಕೆ ಗೈರುಹಾಜರಾದ ವೈದ್ಯರುಗಳ ವಿವರ ಈ ಕೆಳಕಂಡಂತಿವೆ.

1. ಪಾವಗಡ ತಾಲ್ಲೂಕು – ಡಾ॥ ಜಿ.ಆರ್. ಸಂತೋಷ್ ಕುಮಾರ್, ಪಿ.ಹೆಚ್.ಸಿ. ಕೋಟೆಗುಡ್ಡ ದಿನಾಂಕ : 15–5–2005ರಿಂದ 18–5–2005ರವರೆಗೆ ಗೈರು ಹಾಜರಾಗಿರುತ್ತಾರೆ.

2. ಕುಣಿಗಲ್ ತಾಲ್ಲೂಕು – ಡಾ॥ ಲತಾ. ಎಲ್.ಎಂ.ಓ, ಪಿ.ಹೆಚ್.ಸಿ, ಹಾಲಪ್ಪನ ಗುಡ್ಡ ದಿನಾಂಕ : 5–4–2005ರಿಂದ ಇಲ್ಲಿಯವರೆಗೆ ಗೈರು ಹಾಜರಾಗಿರುತ್ತಾರೆ.

ಡಾ॥ ಬಿ.ಜಿ. ಕುಮಾರಸ್ವಾಮಿ, ವೈದ್ಯಾಧಿಕಾರಿ ಪಿ.ಹೆಚ್.ಸಿ. ನಿಡಸಾಲೆ ಇವರು ದಿನಾಂಕ: 25–4–2005 ರಿಂದ 26–5–2005ರವರೆಗೆ ಗೈರು ಹಾಜರಾಗಿರುತ್ತಾರೆ.

3. ಚಿಕ್ಕನಾಯಕನಹಳ್ಳಿ – ಡಾ॥ ಪಿ.ಎಸ್. ಮಹೇಶ್. ಗುತ್ತಿಗೆ ವೈದ್ಯರು, ಪಿ.ಹೆಚ್.ಯು., ಜೆ.ಸಿ.ಪುರ ಇವರು ದಿನಾಂಕ 1–2–2005ರಿಂದ ಇಲ್ಲಿಯವರೆಗೆ ಗೈರು ಹಾಜರಾಗಿರುತ್ತಾರೆ.

3. ಈ ಮೇಲೆ ತಿಳಿಸಿದ 4 ವೈದ್ಯಾಧಿಕಾರಿಗಳ ಮೇಲೆ ಸರ್ಕಾರವು ಕಾನೂನು ರೀತಿ ಕ್ರಮ ಕೈಗೊಂಡಿದೆ ಹಾಗೂ ಸದರಿಯವರ ವೇತನವನ್ನು ತಡೆದುಹಿಡಿಯಲಾಗಿದೆ.

4. ಪ್ರಶ್ನೆ ಸಂಖ್ಯೆ 2 ರಲ್ಲಿ ಉತ್ತರವನ್ನು ನೀಡಲಾಗಿದೆ.

5030 (5723) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ರಾಜ್ಯದಲ್ಲಿರುವ ಆಸ್ಪತ್ರೆಗಳನ್ನು ಮತ್ತು ಆರೋಗ್ಯ ಕೇಂದ್ರಗಳನ್ನು ಸುಸಜ್ಜಿತವಾಗಿ ಮತ್ತು ವ್ಯವಸ್ಥಿತವಾಗಿ ಇಟ್ಟು ಜನಾರೋಗ್ಯ ಸೇವೆಯನ್ನು ಪೂರ್ಣ ಪ್ರಮಾಣದಲ್ಲಿ ಮಾಡಲು ಸರ್ಕಾರ ವಿಫಲವಾಗಿರುವುದು ನಿಜವಲ್ಲವೆ;

2. ವಿಶೇಷತಃ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರದ ಆರೋಗ್ಯ ಸೇವೆಯು ಅತ್ಯಾವಶ್ಯಕವಾಗಿದ್ದು, ಅಲ್ಲಿನ ಆರೋಗ್ಯ ಕೇಂದ್ರಗಳು ಅವ್ಯವಸ್ಥೆಯಿಂದ ಕೂಡಿದ್ದು ವೈದ್ಯರು ಮತ್ತು ಸಿಬ್ಬಂದಿ ಇಲ್ಲದೆ ಆಗಾಗ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಸರ್ಕಾರ ಮನಗಂಡಿದ್ದರೂ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳದಿರಲು ಕಾರಣಗಳೇನು;

3. ಬಹುತೇಕ ಗ್ರಾಮೀಣ ಆರೋಗ್ಯ ಕೇಂದ್ರಗಳು ಮತ್ತು ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ, ಮಹಿಳಾ ವೈದ್ಯರ ಖಾಲಿ ಹುದ್ದೆಗಳು, ಕಾಲಕ್ಕೆ ಸರಿಯಾಗಿ ಕರ್ತವ್ಯದಲ್ಲಿ ಉಪಸ್ಥಿತರಿರದ ಸಿಬ್ಬಂದಿ ವರ್ಗಗಳ ಮೇಲೆ ಸರ್ಕಾರ ಕ್ರಮ ಜರುಗಿಸಿ ಗ್ರಾಮೀಣ ಜನರಿಗೆ ಆರೋಗ್ಯ ಸೇವೆಯನ್ನು ನೀಡಲು ಮುಂದಾಗುವುದೇ;

4. ದಕ್ಷಿಣ ಕನ್ನಡ ಜಿಲ್ಲಾ ಆಸ್ಪತ್ರೆಯಲ್ಲಿರುವ ಎಕ್ಸರೇ ಮತ್ತಿತರ ತಂತ್ರಜ್ಞರ ಹುದ್ದೆಗಳು ಎಷ್ಟು ಮತ್ತು ಅವುಗಳಲ್ಲಿ ಎಷ್ಟು ಖಾಲಿ ಇವೆ, ಹಾಗೂ ಅವುಗಳನ್ನು ಯಾವಾಗ ತುಂಬಲಾಗುವುದು?

ಶ್ರೀ ಎನ್. ಚಲುವರಾಯಸ್ವಾಮಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

1. ಇದು ನಿಜವಿರುವುದಿಲ್ಲ.

2. ಗ್ರಾಮಾಂತರ ಪ್ರದೇಶದಲ್ಲಿ 1681 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 581 ಪ್ರಾಥಮಿಕ ಆರೋಗ್ಯ ಘಟಕಗಳು, 8143 ಉಪ ಕೇಂದ್ರಗಳ ಮುಖಾಂತರ ಆರೋಗ್ಯ ಸೌಲಭ್ಯಗಳನ್ನು ಗ್ರಾಮೀಣ ಜನತೆಗೆ ನೀಡಲಾಗುತ್ತಿದೆ. ವಯೋನಿವೃತ್ತಿ ಹಾಗೂ ಪದೋನ್ನತಿಯಿಂದ ತೆರವಾಗುತ್ತಿರುವ ಖಾಲಿ ಹುದ್ದೆಗಳಿಗೆ ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿ ಹುದ್ದೆಗಳನ್ನು ತುಂಬಲಾಗುತ್ತಿದೆ. ಹಾಗೂ ವೈದ್ಯರುಗಳನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತಿದೆ. ಕಟ್ಟಡಗಳಿಲ್ಲದ ಕಡೆ ಈಗಾಗಲೇ 85 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕಟ್ಟಡಗಳನ್ನು ಕಟ್ಟಲಾಗಿದೆ. ಇನ್ನೂ 94 ಆರೋಗ್ಯ ಕೇಂದ್ರಗಳ ಕಟ್ಟಡಗಳಿಗೆ ಪ್ರಸ್ತಾಪಿಸಲಾಗಿದೆ. 1681 ರಲ್ಲಿ 54 ಕೇಂದ್ರಗಳಿಗೆ ಬಿಟ್ಟು ಉಳಿದೆಲ್ಲಾ ಕೇಂದ್ರಗಳಿಗೂ ಕಟ್ಟಡಗಳಿರುತ್ತವೆ. ಈ 54 ಕೇಂದ್ರಗಳನ್ನು ಸಹ ಮುಂಬರುವ ಹೆಚ್.ಎನ್.ಪಿ. ಯೋಜನೆಯಲ್ಲಿ ಪ್ರಸ್ತಾಪಿಸಲಾಗುವುದು. ಪ್ರಧಾನಮಂತ್ರಿ ಗ್ರಾಮೋದಯ ಯೋಜನೆಯಡಿಯಲ್ಲಿ ಈಗ ಮೂರು ವರ್ಷಗಳಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಉಪ ಕೇಂದ್ರಗಳು, ವಸತಿ ಗೃಹಗಳನ್ನು ದುರಸ್ತಿಗೊಳಿಸಲಾಗಿದೆ. ಹಾಗೂ ನೀರು ವಿದ್ಯುತ್‌ಚ್ಛಕ್ತಿಯ ಕಾರ್ಯಗಳನ್ನು ಸಹ ಕೈಗೆತ್ತಿಕೊಳ್ಳಲಾಗಿದೆ. ಆರೋಗ್ಯ ಸಿಬ್ಬಂದಿಯವರು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೊಳಿಸುವಂತೆ ಉಸ್ತುವಾರಿಯನ್ನು ಬಲಪಡಿಸಲಾಗಿದೆ. ಇದಕ್ಕಾಗಿ ರಾಜ್ಯದ ಕೇಂದ್ರಸ್ಥಾನದಿಂದಲೇ ನಿರ್ದೇಶನಾಯಲದ ಹಿರಿಯ ಅಧಿಕಾರಿಗಳನ್ನು ಪ್ರತಿ ಜಿಲ್ಲೆಗೂ ನೋಡಲ್ ಅಧಿಕಾರಿಗಳೆಂದು ನಿಯೋಜಿಸಲಾಗಿದೆ.

3. ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಯವರಿಗೂ ಸಹ ಕೇಂದ್ರಸ್ಥಾನದಲ್ಲಿ ವಾಸಿಸುವಂತೆ ಆದೇಶಿಸಲಾಗಿದೆ. ಹಾಗೂ ಸಮಯಕ್ಕೆ ಸರಿಯಾಗಿ ಕೇಂದ್ರಗಳಲ್ಲಿ ಹಾಜರಿರಲು ಸೂಚಿಸಲಾಗಿದೆ. ಕರ್ತವ್ಯ ಲೋಪವೆಸಗಿದ ಸಿಬ್ಬಂದಿಗಳ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗುತ್ತಿದೆ. ಹಾಗೂ ಇದಕ್ಕಾಗಿಯೇ ಮುಖ್ಯ ಜಾಗೃತ ಕೋಶವನ್ನು ರಚಿಸಲಾಗಿದೆ.

4. ದಕ್ಷಿಣ ಕನ್ನಡ ಜಿಲ್ಲಾ ಆಸ್ಪತ್ರೆಯಲ್ಲಿ 3 ಎಕ್ಸರೇ ತಂತ್ರಜ್ಞರು ಹುದ್ದೆ ಮಂಜೂರಾಗಿದ್ದು – 2 ತಂತ್ರಜ್ಞರು ಹುದ್ದೆಗಳು ಖಾಲಿ ಇರುತ್ತವೆ. ಖಾಲಿ ಹುದ್ದೆಗಳಿಗೆ ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿ ಹುದ್ದೆಗಳನ್ನು ತುಂಬಲಾಗುತ್ತಿದೆ.

5031 (5724) ಶ್ರೀ. ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಷ್ಟು ಕಣ್ಣಿನ ಆಸ್ಪತ್ರೆಗಳಿಗೆ ನೇತ್ರ ತಜ್ಞರನ್ನು ನೇಮಿಸಲಾಗಿದೆ. ಅವಶ್ಯಕವಿರುವ ಕಡೆಗಳಿಗೆ ಯಾವ ಕಣ್ಣಿನ ತಜ್ಞ ವೈದ್ಯರುಗಳನ್ನು ಒದಗಿಸಿಕೊಡಲು ಯೋಚಿಸಿದೆ.

ಆ) ರಾಜ್ಯದಲ್ಲಿ ಕಣ್ಣಿನ ತಜ್ಞ ವೈದ್ಯರ ಕೊರತೆ ಇದೆಯೇ ಹಾಗೂ ನೊಂದಾಯಿತ ತಜ್ಞ ಕಣ್ಣಿನ ವೈದ್ಯರ ಸಂಖ್ಯೆ ಎಷ್ಟು

ಇ) ಕಣ್ಣಿನ ತಜ್ಞ ವೈದ್ಯರ ಕೊರತೆಯನ್ನು ನೀಗಿಸುವಲ್ಲಿ ಮತ್ತು ಸಾರ್ವಜನಿಕರಿಗೆ ಕಣ್ಣಿನ ಆರೋಗ್ಯ ಪಾಲನೆಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎನ್. ಚಲುವರಾಯಸ್ವಾಮಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಅ) ರಾಜ್ಯದಲ್ಲಿ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಹಾಗೂ ಸಾರ್ವಜನಿಕ ಆಸ್ಪತ್ರೆಗಳಲ್ಲಿ ನೇತ್ರ ತಜ್ಞರನ್ನು ನೇಮಿಸಲಾಗಿದೆ. ಖಾಲಿಯಿರುವ ನೇತ್ರ ತಜ್ಞರ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ತಜ್ಞರನ್ನು ನೇಮಕಾತಿ ಮಾಡಲಾಗಿದೆ. ಮಿಂಟೋ ಕಣ್ಣಾಸ್ಪತ್ರೆಯನ್ನು ಪ್ರಾದೇಶಿಕ ನೇತ್ರ ಚಿಕಿತ್ಸಾ ಸಂಸ್ಥೆಯೆಂದು ಅಭಿವೃದ್ಧಿ ಪಡಿಸಿ ಸಾರ್ವಜನಿಕರಿಗೆ ಉನ್ನತ ಮಟ್ಟದ ಕಣ್ಣಿನ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ. ರಾಜ್ಯದ 5 ವೈದ್ಯಕೀಯ ಮಹಾವಿದ್ಯಾಲಯಗಳನ್ನು ಆಸ್ಪತ್ರೆಗಳನ್ನು ಅಭಿವೃದ್ಧಿಪಡಿಸಿ ಗ್ರಾಮಾಂತರ ಜನತೆಗೆ ಹೆಚ್ಚಿನ ಕಣ್ಣಿನ ಚಿಕಿತ್ಸೆ ಸೌಲಭ್ಯವನ್ನು ಮಾಡಲಾಗಿದೆ.

ಆ) ರಾಜ್ಯದಲ್ಲಿ ಕಣ್ಣಿನ ತಜ್ಞ ವೈದ್ಯರ ಕೊರತೆಯಿರುವುದಿಲ್ಲ ರಾಜ್ಯದಲ್ಲಿ ಒಟ್ಟು 1150 ಕಣ್ಣಿನ ತಜ್ಞರು ಕೆ.ಎಂ.ಸಿಯಲ್ಲಿ ನೊಂದಾಯಿಸಿರುತ್ತಾರೆ.

ಇ) 1) ಎಲ್ಲಾ ಜಿಲ್ಲೆಗಳಲ್ಲಿ ಸ್ವಯಂಸೇವಾ ಸಂಸ್ಥೆಯವರ ಸಹಕಾರದೊಡನೆ ಕಣ್ಣಿನ ಆರೋಗ್ಯ ಹಾಗೂ ಶಸ್ತ್ರಚಿಕಿತ್ಸೆಗಳಿಗೆ ಉಚಿತ ಶಿಬಿರಗಳನ್ನು ಹಮ್ಮಿಕೊಂಡು ಕಣ್ಣಿನ ತಜ್ಞರಿಂದ ಚಿಕಿತ್ಸೆ ಹಾಗೂ ಉಪಚಾರವನ್ನು ಸಾರ್ವಜನಿಕರಿಗೆ ನೀಡಲಾಗುತ್ತಿದೆ.

2) ಖಾಸಗಿ ಕಣ್ಣಿನ ತಜ್ಞರು ಸರ್ಕಾರಿ ಆಸ್ಪತ್ರೆಗಳಲ್ಲಿ ಕಣ್ಣಿನ ತಜ್ಞರ ಕೊರತೆಯಿರುವ ಸ್ಥಳಗಳಲ್ಲಿ ನಡೆಸುವ ಪ್ರತಿ ಕಣ್ಣಿನ ಶಸ್ತ್ರ ಚಿಕಿತ್ಸೆಗೆ 100 ರೂಪಾಯಿ ಗೌರವಧನವನ್ನು ಸರ್ಕಾರದ ಆದೇಶದಂತೆ ನೀಡಲಾಗುತ್ತಿದೆ.

3) ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ವೈದ್ಯಾಧಿಕಾರಿ ಕಣ್ಣಿನ ತಜ್ಞರುಃ ಶುಶ್ರೂಪಕರುಃ ನೇತ್ರ ಸಹಾಯಕರುಃ ಕೊಂಡಿ ಕಾರ್ಯಕರ್ತರು ಹಾಗೂ ಅರೇ ವ್ಯದ್ಯಕೀಯ ಸಿಬ್ಬಂದಿಗಳಿಗೆ ಪ್ರಾಥಮಿಕ ಕಣ್ಣಿನ ಆರೋಗ್ಯ ಹಾಗೂ ರಕ್ಷಣೆಯ ಬಗ್ಗೆ ಹೆಚ್ಚಿನ ತರಬೇತಿಯನ್ನು ನೀಡಲಾಗುತ್ತಿದೆ. ಇದರಿಂದ ರಾಜ್ಯದಲ್ಲಿ ಕಣ್ಣಿನ ತಜ್ಞರ ಕೊರತೆಯಿರುವುದಿಲ್ಲ.